

# ಮಿನಿ ಜೆಸಿಬಿ

## ಮೇಡ್ ಇನ್ ಕೊಡಗು

**ಮಡಿಕೇರಿ ತಾಲ್ಲೂಕಿನ ಹುಲಿತಾಳದ ಅಶ್ವಿನ್ 'ಮಿನಿ ಜೆ.ಸಿ.ಬಿ.' ರೂಪಿಸಿಕೊಂಡಿದ್ದಾರೆ. ಕೃಷಿ ಕಾರ್ಮಿಕರ ಕೊರತೆಗೆ ಉತ್ತರದಂತಿರುವ ಇದು, ದೊಡ್ಡ ಜೆ.ಸಿ.ಬಿ.ಯಂತೆಯೇ ಕಾರ್ಯ ನಿರ್ವಹಿಸುತ್ತದೆ.**

■ **ಆದಿತ್ಯ ಕೆ.ಎ.**

ಕಾರ್ಮಿಕರ ಕೊರತೆ, ಯಂತ್ರಗಳ ಬಳಕೆಗೆ ದುಬಾರಿ ಬಾಡಿಗೆ, ಅತಿವೃಷ್ಟಿ–ಅನಾವೃಷ್ಟಿ ಹೊಡೆತಕ್ಕೆ ರೈತರು ಕೃಷಿಯಿಂದಲೇ ದೂರ ಉಳಿಯುತ್ತಿದ್ದಾರೆ ಎಂಬ ಕೊರಗಿದೆ. ಅದರಲ್ಲೂ ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಾಫಿ, ಬಾಳೆ, ಕಾಳುಮೆಣಸು, ಏಲಕ್ಕಿ ಕೃಷಿಯಂತಹ ಶ್ರಮದಾಯಕ ಕೆಲಸಗಳಿಗೆ ಕಾರ್ಮಿಕರ ಅಭಾವ ತೀವ್ರವಾಗಿದೆ. ಕಾರ್ಮಿಕರ ಕೊರತೆಯನ್ನು ನೀಗಿಸಲು ಕೊಡಗಿನ ಪ್ರಗತಿಪರ ರೈತರೊಬ್ಬರು, ದೇಶೀಯ ಜೆ.ಸಿ.ಬಿ.ಯನ್ನೇ ಅಭಿವೃದ್ಧಿಪಡಿಸಿದ್ದಾರೆ. ಅದೂ 'ಮೇಡ್ ಇನ್ ಕೊಡಗು'. ದೊಡ್ಡ ಜೆ.ಸಿ.ಬಿ. ಮಾದರಿಯಲ್ಲೇ ಈ ಮಿನಿ ಜೆ.ಸಿ.ಬಿ ಸಿದ್ಧವಾಗಿದೆ. ಅದೇ ಮಾದರಿಯಲ್ಲೇ ಕೆಲಸ ಸಹ ಮಾಡುತ್ತಿದೆ.

ಈ ಯಂತ್ರದ ನೆರವಿನಿಂದಲೇ ಪ್ರಗತಿಪರ ರೈತರೊಬ್ಬರು, ತಮ್ಮ ಜಮೀನಿನಲ್ಲಿ ಗುಂಡಿ ತೋಡುವುದು, ಚರಂಡಿ ನಿರ್ಮಾಣ, ಭೂಮಿ ಸಮತಟ್ಟು ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಈಗ ಅವರ ಕೆಲಸವೂ ಸುಲಭವಾಗಿದೆ; ಕಾರ್ಮಿಕರು ಸಿಗುತ್ತಿಲ್ಲ ಎಂಬ ಕೊರಗೂ ದೂರವಾಗಿದೆ. ಅಂದಹಾಗೆ, ಈ ದೇಶೀಯ ಜೆ.ಸಿ.ಬಿ ರೂವಾರಿ ಕೊಡಗಿನ ಅಶ್ವಿನ್‌ಕುಮಾರ್.

'ಕಾರ್ಮಿಕರ ಸಮಸ್ಯೆ ತೀವ್ರಗೊಂಡಿತ್ತು. ಆಗಲೇ ಹೊಳೆದಿದ್ದು ಈ ಯಂತ್ರ ತಯಾರಿಕೆಯ ಆಲೋಚನೆ' ಎಂದು ಅಶ್ವಿನ್ ಹೇಳುತ್ತಾರೆ.

ಈ ಯಂತ್ರದ ಕೆಲಸ ನೋಡಬೇಕಾದರೆ ಮಡಿಕೇರಿ ತಾಲ್ಲೂಕಿನ ಹುಲಿತಾಳಕ್ಕೆ ಬರಬೇಕು. ಆ ಗ್ರಾಮಕ್ಕೆ ಬಂದರೆ ನಳನಳಿಸುತ್ತಿರೋ ಕಾಫಿ ತೋಟ, ಬಾಳೆ ಗಿಡಗಳನ್ನು ಕಾಣಬಹುದು. ಜೆ.ಸಿ.ಬಿ ಸೂತ್ರಧಾರ ಅಶ್ವಿನ್ ಕುಮಾರ್ ಅವರೇ ಅದನ್ನು ಚಲಾಯಿಸುವ ದೃಶ್ಯ ಕಾಣಬಹುದು.

ಬಿ.ಎಸ್ಸಿ. ಪದವೀಧರರಾಗಿರುವ ಅಶ್ವಿನ್‌ಗೆ ಹೊಸ ಆವಿಷ್ಕಾರದಲ್ಲಿ ಹೆಚ್ಚು ಆಸಕ್ತಿ. ಈ ಮಿನಿ ಜೆ.ಸಿ.ಬಿ. ತಯಾರಿಸಿ ಕೊಡಗಿನಲ್ಲಿ ಮಾತ್ರವಲ್ಲದೇ ಇತರೆ ಜಿಲ್ಲೆಗಳಲ್ಲೂ ಪ್ರಸಿದ್ಧರಾಗಿದ್ದಾರೆ. ಬಾಳೆ ತೋಟದಲ್ಲಿ ಸಣ್ಣ ಗುಂಡಿ ತೆಗೆಯಲು ಇದನ್ನು ಪ್ರಾಯೋಗಿಕವಾಗಿ ಬಳಸಿ ಯಶಸ್ವಿ ಆಗಿದ್ದಾರೆ. ಈ ಯಂತ್ರದ ಸಹಾಯದಿಂದ 1 ಗಂಟೆಗೆ 100ಕ್ಕೂ ಹೆಚ್ಚು ಗುಂಡಿ ತೆಗೆಯಲು ಸಾಧ್ಯವಿದೆ. 'ಅರ್ಧ ಲೀಟರ್ ಡೀಸೆಲ್‌ನಲ್ಲಿ ಒಂದು ಗಂಟೆ ಕೆಲಸ ಮಾಡುತ್ತೇನೆ' ಎಂದು ಅವರು ನುಡಿಯುತ್ತಾರೆ.

### ಅಗತ್ಯವಿರುವುದು ಏನು?

ಅದು ನೋಡಲು ಥೇಟ್ ಜೆ.ಸಿ.ಬಿಯಂತೆಯೇ ಕಾಣಿಸುತ್ತೆ. ಅದರ ರೂವಾರಿ ಅಶ್ವಿನ್ ಕುಮಾರ್ ಮಾತ್ರ ಅದನ್ನು 'ಡಿಗ್ಗರ್' ಎಂದೂ ಕರೆಯುತ್ತಾರೆ.

ಈ 'ಡಿಗ್ಗರ್' ತಯಾರಿಕೆಗೆ ಸರಕು ಸಾಗಣೆ ಆಟೊದ 8 ಎಚ್.ಪಿ. ಸಾಮರ್ಥ್ಯದ ಎಂಜಿನ್, ಹೈಡ್ರಾಲಿಕ್ ಟ್ಯಾಂಕ್, ಹೈಡ್ರಾಲಿಕ್ ಪಂಪ್, ಹೈಡ್ರಾಲಿಕ್ ಫಿಲ್ಟರ್, ಪ್ರೆಶರ್ ರೆಗ್ಯುಲೇಟರ್ ಬಳಸಲಾಗಿದೆ. ಮಣ್ಣು ಅಗೆಯಲು ನೆರವಾಗಲು ಬಕೆಟ್, ಸಮತಟ್ಟು ಮಾಡುವ ಬ್ಲೇಡ್‌ನ ಚಲನೆಗೆ ಅನುಕೂಲವಾಗಲೆಂದು ಬೂಮ್ ಸಿಲಿಂಡರ್ ಅಳವಡಿಸಲಾಗಿದೆ. ಜೆ.ಸಿ.ಬಿ.ಯಂತೆಯೇ ಗೇರ್‌ಗಳ ನೆರವಿನಿಂದಲೇ ಈ ವಾಹನ ಕೂಡ ಚಲಿಸುತ್ತದೆ. ಇದರ ನಿರ್ಮಾಣಕ್ಕೆ ಅಂದಾಜು ₹2.5 ಲಕ್ಷ ಖರ್ಚಾಗಿದೆ. 250 ಕೆ.ಜಿ. ತೂಕವಿದೆ. ನಾಲ್ಕು ಟೈರ್ ಹೊಂದಿದೆ. ಸಮತಟ್ಟು ಪ್ರದೇಶದಲ್ಲಿ ಚಲಿಸಲು ಟೈರ್ ಸಾಕು. ಗುಡ್ಡ ಪ್ರದೇಶ, ಕೆಸರು ಇರುವ ಕಡೆ ಡಿಸ್ಕ್‌ಗೆ ಕಬ್ಬಿಣದ ಗೇಜ್ ಅಳವಡಿಸಲು ಅವಕಾಶವಿದೆ.

'ಎರಡು ವರ್ಷದ ಪರಿಶ್ರಮದಿಂದ ಡಿಗ್ಗರ್ ತಯಾರಾಗಿದೆ. ಸಾಕಷ್ಟು ಮಂದಿ ಈ ಮಾದರಿಯ ಡಿಗ್ಗರ್ ತಯಾರಿಸಿಕೊಡುವಂತೆಯೂ ಕೋರಿಕೊಂಡಿದ್ದಾರೆ. ಆದರೆ, ನನಗೆ ಸದ್ಯಕ್ಕೆ ಬಿಡುವಿಲ್ಲ. ಬಂದವರಿಗೆ ತಯಾರಿಸುವ ವಿಧಾನ ಹೇಳಿಕೊಡುತ್ತಿದ್ದೇನೆ' ಎಂದು ಅಶ್ವಿನ್‌ಕುಮಾರ್ ಹೇಳುತ್ತಾರೆ.

■